# ಸಿದ್ಧಲಿಂಗಯ್ಯನವರ ಕಾವ್ಯಗಳು: ದಲಿತ ಸಮುದಾಯದ ಆತ್ಮಕಥನ

**ಸಿದ್ರಾಮ ಯರನಾಳ**

ಸಹಾಯಕ ಪ್ರಾಧ್ಯಾಪಕರು

ಕನ್ನಡ ವಿಭಾಗ

ಸರ್ಕಾರಿ ಪ್ರಥಮದರ್ಜೆ ಕಾಲೇಜು,

ಕೊಕಟನೂರ, ತಾ. ಅಥಣಿ. 591230.

sidram83@gmail.com

**Article Link: https://aksharasurya.com/2023/06/sidram-yaranal/**

ಆಧುನಿಕ ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಆತ್ಮಕಥೆಯು ಒಂದು ವಿಶಿಷ್ಟ ಪ್ರಕಾರದ ಸಾಹಿತ್ಯವಾಗಿದೆ. ಯಾವುದೇ ಒಂದು ಆತ್ಮಕಥೆಯು, ಆತ್ಮಕಥೆಯನ್ನು ಬರೆದುಕೊಂಡ ವ್ಯಕ್ತಿಯ ಜೀವನದಲ್ಲಿ ಅನುಭವಿಸಿದ ಅಥವಾ ಘಟಿಸಿದ ಶೇಕಡಾ 90 ರಷ್ಟು ಸತ್ಯದಿಂದ ಕೂಡಿದ ಸಮಗ್ರ ಮಾಹಿತಿಯನ್ನು ಒದಗಿಸುತ್ತದೆ ಎಂದು ಹೇಳಬಹುದಾಗಿದೆ. ಹಾಗಾಗಿ ಆತ್ಮಕಥೆಗಳ ವ್ಯಾಪ್ತಿಯೂ ವಿಶಾಲವಾಗಿರುತ್ತದೆ.

ಆತ್ಮಕಥೆ ಎಂಬ ಸಾಹಿತ್ಯ ಪ್ರಕಾರದ ಸ್ವರೂಪಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತ ಹೋದರೆ ಆತ್ಮಕಥೆಗಳು ದಲಿತ ಆತ್ಮಕಥೆ, ದಲಿತೇತರ ಆತ್ಮಕಥೆ, ಮಹಿಳಾ ಆತ್ಮಕಥೆ ಮತ್ತು ದಲಿತ ಮಹಿಳಾ ಆತ್ಮಕಥೆ ಎಂದು ವಿಭಿನ್ನ ಪ್ರಕಾರವಾಗಿ ಗೋಚರಿಸುತ್ತವೆ. ವಿಶೇಷವಾಗಿ ನಾವು ದಲಿತ ಆತ್ಮಕಥೆಗಳ ಬಗ್ಗೆ ನೋಡುವುದಾದರೆ, ಅಲ್ಲಿ ಆತ್ಮಕಥೆಯ ರಚನೆಗಾರನೊಬ್ಬನ ವ್ಯಕ್ತಿಗತ ವಿಚಾರಗಳನ್ನು ಮಾತ್ರನೋಡದೆ ಬಹುತೇಕವಾಗಿ ಆತ ಯಾವ ಸಮುದಾಯದ ಹಿನ್ನೆಲೆಯಿಂದ ಬಂದಿರುವವನಾಗಿರುತ್ತಾನೊ ಆ ಸಮುದಾಯದ ಚಿತ್ರಣವನ್ನು ನೋಡಬಹುದಾಗಿದೆ. ಆದ್ದರಿಂದ ದಲಿತ ಜನಾಂಗದ ಒಬ್ಬ ವ್ಯಕ್ತಿಯ ಆತ್ಮಕಥೆಯೊಂದನ್ನು ಓದುವದುವೆಂದರೆ ಅದು ಆ ಸಮುದಾಯದ ಓದೇ ಆಗಿರುತ್ತದೆ. ಆದ್ದರಿಂದ ದಲಿತ ಆತ್ಮಕಥೆಗಳೆಲ್ಲ ಬಹುತೇಕವಾಗಿ ಆ ಸಮುದಾಯದ ಕಥನಗಳೇ ಆಗಿರುಗುತ್ತವೆ.

ಈ ನನ್ನ ಅಭಿಪ್ರಾಯಕ್ಕೆ ಪೂರಕವಾಗಿ ಹೇಳುವದಾದರೆ ಸ್ವಾತಂತ್ರ್ಯ ಪೂರ್ವದಲ್ಲಿ ಡಿ. ಗೋವಿಂದ ದಾಸರವರ ಆತ್ಮಕಥನ, ನಂತರ ಕನ್ನಡದ ಮೊದಲ

ದಲಿತ ಆತ್ಮಕಥನ ಎಂದು ಹೇಳುವ ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ (1994), ತುಂಬಾಡಿ ರಾಮಯ್ಯನವರ ಮಣೆಗಾರ (1999), ಸಿದ್ದಲಿಂಗಯ್ಯನವರ ಊರುಕೇರಿ (2000), ಗೋವಿಂದರಾಜರವರ ಮನವಿಲ್ಲದವರ ಮಧ್ಯ (2000), ದು. ಸರಸ್ವತಿಯವರ ಈಗೇನ ಮಾಡ್ತಿರಿ? (2001), ಲಕ್ಷ್ಮಣರವರ ಸಂಬೋಳಿ (2003), ಮುಳ್ಳೂರ ನಾಗರಾಜರವರ ಮಾಮರದ ಮೇಲೊಂದು ಕೋಗಿಲೆ (2004), ಹನುಮಂತರಾಯ ದೊಡ್ಡಮನಿಯವರ ಪಂಚಮ (2009), ಎಂ. ಎಂ ಮದರಿಯವರ ಗೊಂದಲಿಗ್ಯಾ ಇವುಗಳು ರಚನೆಕಾರನ ವ್ಯಕ್ತಿಗತ ಮಾಹಿತಿಯನ್ನು ನೀಡುವದರೊಂದಿಗೆ ಸಮುದಾಯದ ಸಮಷ್ಟಿ ಮಾಹಿತಿಯನ್ನು ಒದಗಿಸುತ್ತವೆ. ಅಂದ ಮಾತ್ರಕ್ಕೆ ದಲಿತ ಆತ್ಮಕಥೆಯೊಂದನ್ನು ಮಾತ್ರ ಓದುವುದರಿಂದಲೇ ನಮಗೆ ಆ ಸಮುದಾಯದ ಕಥನ ತಿಳಿಯುತ್ತದೆ ಎಂದೇನಿಲ್ಲ. ಅದು ಕಾವ್ಯ, ಕಾದಂಬರಿ ಮತ್ತು ಕಥೆಗಳ ಮೂಲಕವೂ ಅರಿಯಬಹುದಾಗಿದೆ. ಏಕೆಂದರೆ ಒಂದು ಆತ್ಮಕಥೆಯ ಸೂಕ್ಷ್ಮ ನೆಲೆ (ಬಡತನ–ಹಸಿವು, ಜಾತೀಯತೆ ಮತ್ತು ಅಸ್ಪೃಶ್ಯತೆ, ಜೀತಗಾರಿಕೆ, ಕೇರಿ, ಬೇಸಾಯ) ಗಳನ್ನು ಇವುಗಳಲ್ಲಿ ಕಾಣಬಹುದಾಗಿದೆ. ಒಂದು ಜನಾಂಗದ ಕವಿಯಾದ ಸಿದ್ದಲಿಂಗಯ್ಯನವರ ಕಾವ್ಯಗಳು ಓದುವುದುವೆಂದರೆ ಅದು ಒಂದು ಸಮುದಾಯದ ಆತ್ಮಕಥನವನ್ನು ಓದುವುದೇ ಆಗಿದೆ.

ದಲಿತ ಸಮುದಾಯದ ಶಾಲಾ ಮಕ್ಕಳ ಹಸಿವಿನ ತೀವ್ರತೆಯನ್ನು ಬಿಂಬಿಸುವ ಚಿತ್ರಣವನ್ನು ತುಂಬಾಡಿ ರಾಮಯ್ಯನವರು ತಮ್ಮ ಆತ್ಮಕಥೆಯಲ್ಲಿ ಹೀಗೆ ಉಲ್ಲೇಖಿಸುತ್ತಾರೆ: "ಒಂದು ದಿನ ಕೊರಟಗೇರಿಯಿಂದ ನಾಲ್ಕು ಗಂಟೆಗೆ ಸ್ಕೂಲು ಮುಗಿಸಿಕೊಂಡು ಮನೆಗೆ ಬಂದಿದ್ದೆ. ಬಂದವನೇ ಹಿಟ್ಟಿನ ಸೋರೆ ನೋಡಿದೆ. ಖಾಲಿ ಕಂಡಿತು ಹೊಟ್ಟೆ ತಕತಕ ಅನತಿತ್ತು. ಯಾವ ಮಡಕೆಯಲ್ಲಾದರೂ ತಿನ್ನುವುದಕ್ಕೆ ಏನಾದರು ಇದೆ ಅಂತ ತಡಕಿದರೆ ಏನೂ ಸಿಗಲಿಲ್ಲ. ಬೇಸಿಗೆ ಕಾಲ ತುಂಬಾಡಿ ಕೆರೆ ತುಂಬಿದ್ದರಿಂದ ಊರಿನ ಸುತ್ತ ಕಡ್ಲೆ ಗಿಡ ಹಾಕಿದ್ದರು. ನಮ್ಮ ಹಟ್ಟಿಯ ಸ್ವಲ್ಪ ದೂರದಲ್ಲೇ ವಡ್ಡರ ವೆಂಕಟಪ್ಪನ ಹೊಲ ಸ್ವಲ್ಪ ತಗ್ಗಿನಲ್ಲಿದ್ದಿದ್ದರಿಂದ ಹೊಲದಲ್ಲಿ ಕೂತರೆ ಯಾರಿಗೂ ಕಾಣಿಸುತ್ತಿರಲಿಲ್ಲ. ಅವರ ಕಡ್ಲೆ ಗಿಡ ಇದ್ದ ಹೊಲಕ್ಕೆ ಸೀದಾ ಹೋದವನೆ ಕೊನೆ ಸೀಳಿನಲ್ಲಿ ಕುಳಿತುಕೊಂಡು ಗಿಡದಲ್ಲಿದ್ದ ಕಡ್ಲೆಕಾಯಿಯನ್ನು ಒಂದೊಂದು ಬಿಡಿಸಿ ತಿನ್ನಲು ಮುಂದಾದೆ ಆಗ ನನಗಿದ್ದ ಹಸಿವು ಸುತ್ತಲಿದ್ದುದನೆಲ್ಲ ಮರೆಸಿತ್ತು. ಬಳ್ಳಿ ಗಿಡವಾದ್ದರಿಂದ ಗಿಡ ಮುರಿಯದೆ ಕಡ್ಲೆಕಾಯಿ ಬಿಡಿಸಿ ತಿಂದು,

ಬೇರನ್ನು ಮೊದಲಿನಂತೆ ನೆಲಕ್ಕೆ ಊರಿದರೆ, ಗಿಡಕ್ಕೆ ಏನೂ ಆಗಿಲ್ಲವೇನೋ ಎಂಬಂತೆ ಕಾಣುತಿತ್ತು. ಹೀಗೆ ನಾಲ್ಕೈದು ಗಿಡ ಬಿಡಿಸಿ ಕಾಯಿ ತಿಂದಿರಬೇಕು, ಏನೋ ಶಬ್ಧವಾದಂತಾಗಿ ಕತ್ತೆತ್ತಿ ನೋಡಿದೆ. ವಡ್ಡರ ವೆಂಕಟಪ್ಪ (ಅವರನ್ನು ಮಾಮಾ ಎಂದು ಕರೆಯುತ್ತಿದ್ದೆ) ನನ್ನ ಮುಂದೆ ಯಮ ದೂತನಂತೆ ನಿಂತಿದ್ದರು. ಅವರನ್ನು ನೋಡಿದೊಡನೆಯೆ ನನ್ನ ಜಂಘಾ ಬಲವೆಲ್ಲವೂ ಉಚ್ಚೆ ಹೊಯ್ದುಕೊಳ್ಳುವುದಕ್ಕೆ ರೆಡಿಯಾಗಿತ್ತಿದೆ..... ಆದರೆ ನಾನು ನಿರೀಕ್ಷಿಸಿದಂತೆ ವೆಂಕಟಪ್ಪ ಮಾಮ ಹೊಡೆಯಲಿಲ್ಲ 'ಬಾ ಹೊಲೇರ ಮುದ್ದ ಹನುಮಪ್ಪನ ಹತ್ತಿರ ನ್ಯಾಯ ಒದಗಿಸ್ತನಿ. ನೀನ್ ಮಾಡಿದು ಸರಿಯೋ! ಅಂದರು. ಅದಕ್ಕೆ ನಾನು ಒಂದೇಟು ಹೊಡೆದು ಬಿಡೋ ಮಾಮ! ಅವ್ರು ಹತ್ತಿರ ಹೋಗೋದು ಬ್ಯಾಡ ಅವಮಾನವಾಗ್ತೈತಿ ಅಂತ ಅಂಗಾಲಚಿ ಬೇಡಿಕೊಂಡರೂ ಕೇಳಲಿಲ್ಲ. ನನ್ನ ಕೈ ಹಿಡಿದು ಎಳೆಯುತ್ತಾ ಊರಕಡೆ ಹೊರಟೇಬಿಟ್ಟ."[1] ದಲಿತ ಸಮುದಾಯದ ಇಂತಹ ಬಡತನ ಮತ್ತು ಹಸಿವಿನ ತಲ್ಲಣದ ಸಾಕಷ್ಟು ಸನ್ನಿವೇಶಗಳು ಹಾಗೂ ಶತ–ಶತಮಾನಗಳಿಂದ ಮೇಲು ವರ್ಗದವರ ಅವಕೃಪೆಗೆ ಒಳಗಾಗಿ ಅನುಭವಿಸಿದ ಅವಮಾನ, ನೋವು, ರಾಜಕೀಯ ಸ್ವಾತಂತ್ರ್ಯದಿಂದ ವಂಚಿತರಾಗಿ ಪ್ರಾಣಿಗಳಗಿಂತಲೂ ಹೀನ ಬದುಕನ್ನು ಸಾಗಿಸಿದ ಅಸ್ಪೃಶ್ಯ ಸಮುದಾಯದ ಆಕ್ರಂದನಗಳನ್ನು ಕವಿ ಸಿದ್ದಲಿಂಗಯ್ಯನವರು ತಮ್ಮ ಕಾವ್ಯದ ವಸ್ತುವನ್ನಾಗಿರಿಸಿ; ದಲಿತ ಸಮುದಾಯದ ಜನರು ಅನುಭವಿಸಿದ ಹಿಂಸೆ, ಅನ್ಯಾಯ, ಅಪಮಾನ, ಅತ್ಯಾಚಾರದ ನೋವು, ಬಡತನದ ಬೇಗೆ ಮುಂತಾದ ನೋವಿನ ಸರಮಾಲೆಗಳನ್ನು ಮನಕರಗುವಂತೆ ತಮ್ಮ ಕಾವ್ಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಹಸಿವಿನಿಂದ ಸತ್ತೋರು ಸೈಜಗಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು ನನ್ನ ಜನಗಳು
ಕಾಲು ಕೈಯಿ ಹಿಡಿಯೋರು ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ ನನ್ನ ಜನಗಳು

(ನನ್ನ ಜನಗಳು)

ಇವರ ಈ 'ನನ್ನ ಜನಗಳು', 'ಚೋಮನ ಮಕ್ಕಳ ಹಾಡು', ಹಾಗೂ 'ಬೆಲ್ಚಿಯ ಹಾಡು' ಎಂಬ ಕವಿತೆಗಳು ಬಡತನದ ಮತ್ತು ಅಸ್ಪೃಶ್ಯತೆಯಿಂದಾಗಿ ದಲಿತ ಸಮುದಾಯಗಳು ಬರಿ ಮೈಯಲ್ಲಿದ್ದು, ಹೊಟ್ಟೆಗೆ ಅನ್ನ ಕಾಣದೆ, ಬಡ್ಡಿ ತೆತ್ತು ನಡೆಸುವ ಜೀವನದ ಧಾರುಣ ಸ್ಥಿತಿಯನ್ನು ಬಯಲಗಿಡುತ್ತವೆ. ಬಹುಶಃ ಕನ್ನಡ

ಸಾಹಿತ್ಯದಲ್ಲಿ ದಲಿತರ ಬದುಕಿನ ಧಾರುಣತೆಯನ್ನು ಕಾವ್ಯದ ಮೂಲಕ ತೋರಿಸದವರೆಂದರೆ ಸಿದ್ದಲಿಂಗಯ್ಯನವರೆ ಮೊದಲಿಗರೆಂದು ಹೇಳಬಹುದಾಗಿದೆ. ಡಾ. ಡಿ. ಆರ್. ನಾಗರಾಜವರು ಹೇಳುವಂತೆ "ಒಂದು ಜನಾಂಗವನ್ನು ಎರೆಡು ರೀತಿಯಲ್ಲಿ ಕಟ್ಟಲು ಸಾಧ್ಯ. ಒಂದು ರಾಜಕೀಯ ಸಂಕಲ್ಪದ ಮೂಲಕ, ಇನ್ನೊಂದು ಸಾಹಿತ್ಯ ಸಂಕಲ್ಪದ ಮೂಲಕ." ಇಲ್ಲಿ ಸಿದ್ದಲಿಂಗಯ್ಯನವರು ದಲಿತ ಜನಾಂಗದ ಕಥನವನ್ನು ಕಟ್ಟಿಕೊಟ್ಟಿದ್ದು ತಮ್ಮ ಕಾವ್ಯದ ಮೂಲಕ ಎಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ.

ನಾವು ಯಾವುದೇ ದಲಿತ ಆತ್ಮಕಥೆಯನ್ನು ನೋಡಿದರೂ ಜಾತಿ ವ್ಯವಸ್ಥೆಯು ಸೃಷ್ಟಿಸಿದ ನರಕದ ಅನುಭದಿಂದ ಪಾರಾಗಬೇಕೆಂಬ ಬಲವಾದ ಹಂಬಲ ಮತ್ತು ಬಯಕೆ ಆಗಿರುತ್ತದೆ, ಆತ್ಮಕಥೆಗಾರ್ತಿಯಾದ ನೇತ್ರಾವತಿಯವರು "ಶಾಲೆಯನ್ನು ಮುಗಿಸಿಕೊಂಡು ಎತ್ತುಗಳಿಗೆ ಹುಲ್ಲುತರಲು ತನ್ನ ಗೆಳತಿಯೊಂದಿಗೆ ಹೋಗಿರುತ್ತಾರೆ. ಅಲ್ಲಿ ತನ್ನ ಗೆಳತಿ ಲಕ್ಷ್ಮಿ ಮನೆಗೆ ಹೋದಾಗ ಅವರಿಗೆ ಹೊರಗಡೆ ಕಿಟಕಿಯಲ್ಲಿಟ್ಟ ಗ್ಲಾಸಿನಲ್ಲಿ ಕಾಫಿಯನ್ನು ಕೊಡುತ್ತಾರೆ. ಒಂದೊಂದು ಸಾರಿ ಗ್ಲಾಸಿನಲ್ಲಿ ದೂಳು ಬಿದ್ದಿದ್ದನ್ನು ನೋಡಿದರೂ ನೋಡದ ಹಾಗೆ ಅದರಲ್ಲೆ ಹಾಕುತ್ತಿರುತ್ತಾರೆ. ಬೇಡ ಎಂದರೆ ಎಷ್ಟು ಧಿಮಾಕು ಎಂದು ತಿಳಿಯುತ್ತಾರೆ ಎಂದು ಹಾಗೆಯೇ ಕುಡಿದುಬಿಡುತ್ತಾರೆ, ಮತ್ತೆ ಗ್ಲಾಸನ್ನು ತೊಳೆದು ಅಲ್ಲಿಯೇ ಇಡುತ್ತಾರೆ." ಈ ರೀತಿ ಅಸ್ಪೃಶ್ಯತೆಯನ್ನು ಅನುಭವಿಸಿದ ನೇತ್ರಾವತಿಯವರಿಗೆ ಲಕ್ಷ್ಮಿಮನೆ ನೋಡಲು ತುಂಬಾ ಚೆನ್ನಾಗಿದ್ದು ಅವರ ಮನೆಯಲ್ಲೆಲ್ಲಾ ಓಡಾಡಬೇಕು ಅಂತನ್ನಿಸುತ್ತದೆ. ಆದರೆ ಅದು ಆಗುತ್ತಿರಲಿಲ್ಲ "ಒಕ್ಕಲಿಗರ ಮನೆಯಲ್ಲಿ ಹುಟ್ಟಿದಿದ್ದರೆ"[2] ಎಷ್ಟು ಚೆನ್ನಾಗಿರುತ್ತಿತ್ತು ಎಂದು ಕನಸು ಕಾಣುತ್ತಾರೆ. ಸಿದ್ದಿಲಿಂಗಯ್ಯನವರ ಎಷ್ಟೋ ಕಾವ್ಯಗಳು ಈ ಆಶಯವನ್ನು ಹೊತ್ತುನಿಂತಿವೆ. ಅವರ ಚೋಮ ನಾಟಕದ ಎರೆಡು ಹಾಡುಗಳಲ್ಲಿನ ಅಜ್ಜಿಯ ಹಾಡು ಕವಿತೆಯಲ್ಲಿ

ಈ ಊರಿನ ಜಮೀನುದಾರ
ಸಂಕಪಯ್ಯ ನನ್ನ ಮಗ
ನಮ್ಮದು ಊರಿಗೆ ದೊಡ್ಡ ಜಾತಿ
ಭೂಮಿಯ ದೇವರು ನಮ್ಮ ಜನ

---------------------------------------------

---------------------------------------------

ಹೀಗೆನ್ನುವ ಮುದುಕಿಗೆ ಸಾವೇ ಇಲ್ಲವೆ

ಚೋಮನಿಗೆಂದೂ ನೆಲವೇ ಬೇಡವೆ
ನೋವನು ಉಂಡು ನೋವನು ಹೊದಿಯುವ
ದಲಿತರ ಬಾಳಿಗೆ ಬೆಳಕೇ ಬೇಡವೆ?

ವರ್ತಮಾನದ ಕಹಿ ಪರಿಸ್ಥಿತಿಯ ಅರಿವುವನ್ನು ಹೊಂದಿ ಭವಿಷ್ಯತ್ವ ಉತ್ತಮವಾಗಿರಲಿ ಅಥವಾ ಇದುಕ್ಕಿಂತ ಭಿನ್ನವಾಗಿರಬೇಕೆಂಬ ಒತ್ತಾಸೆಗಳು ಸಿದ್ದಲಿಂಗಯ್ಯನವರ ಸಾವಿರಾರು ನದಿಗಳು ಕವಿತೆಯಲ್ಲಿ ಕಾಣುತ್ತೇವೆ.

ನೆನ್ನೆ ದಿನ
ನನ್ನಜನ
ಬೆಟ್ಟದಂತೆ ಬಂದರು
ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತ್ತಿರುವ ಕಣ್ಣುಗಳು
ಹಗಲು ರಾತ್ರಿಯನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನ ವಾಯಿತು ಅವರು ಕುಣಿಯುವ ಹುಚ್ಚಿಗೆ
ಇರುವೆಯಂತೆ ಹರಿವ ಸಾಲು ಹುಲಿಸಿಂಹದ ದನಿಗಳು
ಧಿಕ್ಕಾರ ಧಿಕ್ಕಾರ ಅಸಮಾನತೆಗೆ

ಒಂದು ಜನಾಂಗವು ಉಳ್ಳವರು ಕೊಡುವ ನೋವನ್ನು ಸಹಿಸಿಕೊಂಡು ಅದು ಮೀತಿ ಮೀರಿದಾಗ ಅನಿವಾರ್ಯವಾಗಿ ಸಹನೆಯನ್ನು ಕಳೆದುಕೊಂಡು ಹೇಗೆ ಲಕ್ಷ ಲಕ್ಷ ಜನ ಸಾಗರೋಪಾದಿಯಲ್ಲಿ ಸಿಡಿದೆದ್ದು ಹೋರಾಟದ ಹಾದಿಯನ್ನು ತುಳಿದು, ಕ್ರಾಂತಿಗೆ ಸಜ್ಜಾದರು ಎಂಬುದನ್ನು ಬೆಟ್ಟದಂತೆ ಬಂದರು ಎಂಬ ಧ್ವನಿಯ ಮೂಲಕ ವಿಶಿಷ್ಟವಾಗಿ ಹೇಳುತ್ತಾರೆ, ಕವಿ ಸಿದ್ದಲಿಂಗಯ್ಯನವರು. ಇಲ್ಲಿ ಅಸಮಾನತೆ ಮತ್ತು ಶ್ರೀಮಂತರ ಸೊಕ್ಕಿಗೆ ಜನರಲ್ಲಿರುವ ಆಕ್ರೋಶದ ಚೈತನ್ಯ, ಸಾವಿರಾರು ನದಿಗಳಾಗಿ ಭೋರ್ಗರೆದು ಸಮುದಾಯವೊಂದು ಹೇಗೆ ಬದಲಾವಣೆಯ ಹಾದಿಯನ್ನು ಹಿಡಿಯಿತು ಎಂದು ಹೇಳುತ್ತಾರೆ. ಜಾತಿ ಮತಗಳ ಮುಳ್ಳಿನ ಮಳೆಗೆ ಮೈಯೊಡ್ಡಿ ಮೆತ್ತಗಾದ ದಲಿತರು ಹೋರಾಟದ ಹಾದಿಯನ್ನು ತುಳಿದು ತಾವೂ ಮನುಷ್ಯರೇ ನಮಗೂ ಒಂದು ಜೀವವಿದೆ ನಮ್ಮನ್ನೂ ಮನುಷ್ಯರಂತೆ ಕಾಣಿ ಎಂದು, ಎಚ್ಚರಿಕೆಯ ಧ್ವನಿಯಲ್ಲಿ ದಲಿತರು ಬರುವರು ದಾರಿ ಬಿಡಿ ದಲಿತರ ಕೈಗೆ ರಾಜ್ಯಕೊಡಿ ಎಂದು ಕೇಳುತ್ತಾರೆ. ಈ ಕವಿತೆಯ ಸಾಲುಗಳು ಕೂಡಾ ಕೇವಲ ಕವಿಯ ಬೇಡಿಕೆಯಾಗಿರದೆ ಒಂದು ಸಮುದಾಯದ ಬೇಡಿಕೆಯಾಗಿದ್ದು,

ಭವಿಷ್ಯತ್ತಿನಲ್ಲಿ ರಾಜಕೀಯ ಪ್ರಾತಿನಿಧ್ಯ ಮತ್ತು ಸಾಮಾಜಿಕ ಸಮಾನತೆಯು ಸಾಕಾರಗೊಳ್ಳಬೇಕೆಂಬ ಆಶಯವಿದೆ.

ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ದಲಿತ ಕವಿಗಳು ಆಗಿ ಹೋಗಿದ್ದಾರೆ ಆದರೆ ಸಿದ್ದಲಿಂಗಯ್ಯನವರ ಕಾವ್ಯಗಳಲ್ಲಿ ದಲಿತ ಸಮುದಾಯದ ಸಂವೇಧನೆ ಯಥೇಚ್ಚವಾಗಿದೆ ಎಂದು ಹೇಳಬಹುದು. ದಲಿತ ಸಮುದಾಯಗಳು ಹೇಗೆ ಚರಿತ್ರೆಯುದ್ದಕ್ಕೂ ಉಳ್ಳವರಿಂದ ಹೇಗೆ ಶೋಷಣೆಗೊಳಗಾಗಿವೆ ಎಂಬುದನ್ನು ಕವಿ ಸಿದ್ದಲಿಂಗಯ್ಯನವರು ತಮ್ಮ ಬಿದ್ದಾವು ಮನೆಗಳು ಎಂಬ ಕಾವ್ಯದ ಭಾಗದಲ್ಲಿ ಒಂದು ಸಮುದಾಯವು ಬದುಕಿನಲ್ಲಿ ಅನುಭಸಿದ ಶೋಷಣೆಯ ಕರಾಳತೆಯನ್ನು ನೆನೆಪಿಗೆ ತರುತ್ತದೆ.

ಬಿದ್ದಾವು ಮನೆಗಳು ಬಿದ್ದಾವು ಹೆಣಗಳು<br>ಬಿದ್ದಾವು ತೆಂಗಿನ ಗರಿಗಳು। ಅಣ್ಣಯ್ಯ।<br>ಬಡವರ ಸಾವು ಆಯ್ತಲ್ಲೊ

ಬಡವರ ಮನೆಗಳನ್ನು ಕೆಡವಿ ಅವರ ಮಕ್ಕಳು, ಮರಿ ಮತ್ತು ಬಸುರಿ–ಬಾಣಂತಿಯರನ್ನು ಶ್ರೀಮಂತರು ಹೇಗೆ ಅವರ ಬದುಕನ್ನು ನರಕ ಯಾತನೆಯನ್ನುಂಟು ಮಾಡಿ ಅತಂತ್ರಗೊಳಿಸಿದರು ಎಂಬುದನ್ನು ಕವಿತೆ ಚಿತ್ರಿಸುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಏಳು ದಶಕಗಳು ಕಳೆದರೂ ಅಸ್ಪೃಶ್ಯರ ಬದುಕು ಉದ್ದಾರವಾಗಲಿಲ್ಲ ಎಂದು ಹೇಳಿ ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ? ಎಂದು ಪ್ರಶ್ನಿಸಿಸುತ್ತಾರೆ. ಆ ಕಾರಣಕ್ಕೆ ಅವರು ತಮ್ಮ ಇನ್ನೊಂದು ಕವಿತೆಯಾದ 'ಕನವರಿಕೆ' ಎಂಬ ಕವಿತೆಯಲ್ಲಿ "ನಡುಹಗಲಿನಲ್ಲಿ ಕಲ್ಲು ಹೊತ್ತಿರುವ ಸುಡುವ ನೆತ್ತಿಗೆ ಸಿಂಬಿಯಾಗಲೆಂದು ಅಪರಾತ್ರಿಯಲ್ಲಿ ಕತ್ತು ಹಿಸುಕುವ ಕೈಗಳು ಬೆಚ್ಚಿ ಕೆಳಗಿಳಿಯೆಲೆಂದು ನನ್ನ ಕವಿತೆ ಹಂಬಲಿಸುತ್ತದೆ". ಎಂದು ಅಭಿಪ್ರಾಯ ಪಡುತ್ತಾರೆ. ಈ ಕವಿತೆಯ ಸಾಲುಗಳಂತೂ ಕವಿಗೆ ತನ್ನ ಸಮುದಾಯದವರು ಅನುಭವಿಸುವ ಶೋಷಣೆಯ ಬಗ್ಗೆ ಇರುವ ಅಂತಃಕರಣ ಮಾತ್ರ ವ್ಯಕ್ತಪಡಿಸದೆ ದಲಿತರ ಮುಂದಿನ ಬದುಕದಾರೂ ಶುದ್ಧವಾಗೀತು ಎಂಬ ಆಸೆಯನ್ನು ಹೊಂದಿದ್ದಾರೆ

"ಪಟ್ಟ ಪಾಡೆಲ್ಲವನ್ನು ಹುಟ್ಟು ಹಾಡಾಗಿಸಿದ ಹುಟ್ಟು ಕವಿ ಬೇಂದ್ರೆಯಾದರೆ, ಕಂಡುಂಡ ಸಮುದಾಯದ ನೋವೆಲ್ಲವನ್ನು ಸಮುದಾಯ ಪರ ಹಾಡಾಗಿಸಿದ ಸಮುದಾಯ ಕವಿ ಡಾ. ಸಿದ್ದಲಿಂಗಯ್ಯ"[3] ಎಂದು ಡಾ. ಉಮಾಶಂಕರ ಎಚ್. ಡಿ.

ಯವರ ಮಾತು ನೂರಕ್ಕೆ ನೂರು ಒಪ್ಪುವಂತದಾಗಿದೆ, ಅವರ ಊರು ಕೇರಿ ಆತ್ಮಕಥೆ ಓದಿದಾಗ ಒಬ್ಬ ಓದುಗನಿಗೆ ಆ ಸಮುದಾಯದ ಬಗ್ಗೆ ಲಭ್ಯವಾಗುವ ಮಾಹಿತಿಯಷ್ಟೇ ಮಾಹಿತಿ ಆತನ ಕಾವ್ಯ ಓದುವುದರಿಂದ ಲಭ್ಯವಾಗುತ್ತದೆ.

ಒಂದು ದಲಿತ ಸಂಸ್ಕೃತಿಯ ನೆಲೆಗಳನ್ನು ದಲಿತ ಆತ್ಮಕಥನಕಾರರು ತಮ್ಮ ತಮ್ಮ ಆತ್ಮಕಥೆಗಳಲ್ಲಿ ತಮ್ಮ ತಮ್ಮ ಸಾಂಸ್ಕೃತಿಕ ನೆಲೆಯಲ್ಲಿ ಬಹಳ ವಿಶಿಷ್ಟವಾಗಿ ನೆಲೆಗೊಳಿಸಿದ್ದಾರೆ. ಲಿಂಗದೇವರು ಹಳೆಮನೆಯವರು ಹೇಳುವಂತೆ ದಲಿತ ಕವಿ ರಚನೆಕಾರನಿಂದ ಬಂದಂತ ಕಥೆ, ಕಾವ್ಯ, ಕಾದಂಬರಿ ಯಾವುದೇ ಆಗಲಿ ಅವು Biographical Details ಆಗಿರುತ್ತವೆ. ಸಿದ್ದಲಿಂಗಯ್ಯನವರ ಒಂದು ಮೂಳೆಯ ಹಾಡು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. "ಆತ್ಮಚರಿತ್ರೆ ಯಾರದ್ದೇ ಆಗಿರಲಿ ಅದು ಯಾವಗಲೂ ವೈಯಕ್ತಿಕ ಷಯಗಳ ಜೊತೆ ಜೊತೆಯಲ್ಲಿ ಸಾಮುದಾಯಿಕ, ಸಾಂಸ್ಕೃತಿಕ ವಿವರಗಳು ಬಿತ್ತರಗೊಳ್ಳುತ್ತಿರಬೇಕು. ಹೀಗೆ ಜೊತೆಗೂಡಿ ಬಂದಾಗಲೇ ಅದಕ್ಕೆ ಬೆಲೆ"[4] ಎಂದು ಹೇಳುತ್ತಾರೆ ಜಿ. ಆರ್. ತಿಪ್ಪೇಸ್ವಾಮಿ. ಅದೇ ರೀತಿ ಸಿದ್ದಲಿಂಗಯ್ಯನವರ ಯಾವುದೇ ಕಾವ್ಯನೋಡಿದರೆ ಅಲ್ಲಿ ಪರಂಪರೆಯ ನಂಬಿಕೆ, ಆಚರಣೆಗಳು, ಸಂಪ್ರದಾಯಗಳು, ಆಹಾರ ಪದ್ದತಿ, ಉಡುಗೆ–ತೊಡುಗೆ ಮುಂತಾದ ಮೌಲಿಕ ವಿಚಾರಗಳು ದಾಖಲಾಗಿವೆ. ಅವರ ಭೂತನ ಕಥೆ ಕವಿತೆಯಲ್ಲಿ ದಲಿತ ಸಮುದಾಯಗಳು ಗ್ರಾಮ ದೇವತೆಗಳ ಹರಕೆಯನ್ನು ತೀರಿಸುವ ಪರಿಯ ಸಾಂಸ್ಕೃತಿಕ ಅನನ್ಯತೆಯನ್ನು ನಾವು ನೋಡಬಹುದು.

ದಲಿತರ ದೇವರು ಧರಣಿಗೆ ದೊಡ್ಡೋನು
ವೀರಾದಿ ವೀರ ಭೂತಪ್ಪ ಸೋತಂತ
ಮರ್ಮದ ಕಥೆಯ ಕೇಳಿರಿ!
ಹಂದಿಯ ಕಡಿಬೇಕೊ ಕೋಳಿಯ ಕೊಯ್ಯಬೇಕೊ
ಕುರಿಕೋಣನ ಬಲಿಯಕೊಡಬೇಕೊ! ಜಾತ್ರೆಗೆ
ಇರುವೆಯ ಸಾಲದೆಂಬಂತೆ ಜನ ಬಂದೋ

ಒಂದು ದಲಿತ ಆತ್ಮಕಥೆಯ ಸ್ವರೂಪದ ನೆಲೆಗಳಾದ ಬಡತನ, ಅಸ್ಪೃಶ್ಯತೆ, ಶೋಷಣೆ, ಸಾಮಜಿಕ ಬದಲಾವಣೆಯ ಹಂಬಲಗಳು ಮತ್ತು ರಾಜಕೀಯ ಸ್ವಾತಂತ್ರ್ಯದ ಬೇಡಿಕೆ, ಎಲ್ಲವೂ ನೆಲೆಗೊಂಡಿರುವದನ್ನು ನಾವು ಡಾ. ಸಿದ್ದಲಿಂಗಯ್ಯನವರ ಕಾವ್ಯಗಳಲ್ಲಿ ಕಾಣಬಹುದಾಗಿದೆ. ಆ ಕಾರಣದಿಂದಾಗಿ ಸಿದ್ದಲಿಂಗಯ್ಯನವರ ಕಾವ್ಯಗಳು ಒಂದು ಸಮುದಾಯದ ಆತ್ಮಕಥೆಯಾಗಿವೆ.

ಮೊಗಳ್ಳಿಯಂತ ಹಿರಿಯ ವಿದ್ವಾಂಸರು "ದಲಿತ ಆತ್ಮಕಥೆಯಾಗುವ ಶಕ್ತಿ ಕೇವಲ ಸಿದ್ದಲಿಂಗಯ್ಯನವರ ಕಾವ್ಯಕ್ಕೆ ಮಾತ್ರ" ಎಂದು ಹೇಳಿರುವದು ಗಮನಾರ್ಹ. ಸಿದ್ದಲಿಂಗಯ್ಯನವರ ಘನತೆಯ ತೂಕ ಇನ್ನೂ ಹೆಚ್ಚಾಗುತ್ತದೆ ಎಂದು ಹೇಳಬಹುದು.

**ಅಡಿ ಟಿಪ್ಪಣಿ:**

1. ತುಂಬಾಡಿರಾಮಯ್ಯ:ಮಣೆಗಾರ–ಪ್ರಕಟಣೆ: 2006ಕನ್ನಡ ಮತ್ತು ಸಂಸ್ಕೃತ ಇಲಾಖೆ–ಪುಟ ಸಂಖ್ಯೆ:54
2. ಡಾ. ಹೊಂಬಯ್ಯ–ಕನ್ನಡದಲಿತಆತ್ಮಕಥೆಗಳು–ರಚನಾಪ್ರಕಾಶನ, ಹೆಬ್ಬಾಳ, ಮೈಸೂರು–ಪ್ರಕಟಣೆ 2007–ಪುಟ ಸಂಖ್ಯೆ–147
3. ಡಾ. ಉಮಾಶಂಕರ ಎಚ್ ಡಿ–ಸಮುದಾಯಗಳನ್ನೇ ಕಾವ್ಯವಾಗಿಸಿದ ನಾಡ ಕವಿ ಸಿದ್ದಲಿಂಗಯ್ಯ ಲೇಖನ–ಬುಕ್ ಬ್ರಹ್ಮ

**ಪರಾಮರ್ಶನ ಗ್ರಂಥಗಳು:**

1. ಡಾ. ಸಿದ್ದಲಿಂಗಯ್ಯ–ಮೆರವಣಿಗೆ:ಅಂಕಿತಾ ಪ್ರಕಾಶನ ಪ್ರಕಟಣೆ–2012.
2. ಡಾ. ಹೊಂಬಯ್ಯ–ಕನ್ನಡದಲಿತ ಆತ್ಮಕಥೆಗಳು(ಸಂಶೋಧನೆಗ್ರಂಥ)– ಡಾ. ಹೊಂಬಯ್ಯ.
3. ಅಪ್ಪರಾಯ ಮದರಿ–ಗೊಂದಲಿಗ್ಯಾ–ಲೋಹಿಯಾ ಪ್ರಕಾಶನ ಬಳ್ಳಾರಿ ಪ್ರಕಟಣೆ–2012
4. ಡಾ. ಸಿದ್ದಲಿಂಗಯ್ಯ–ಊರುಕೇರಿ:ಭಾಗ–1 & ಭಾಗ–2ಅಂಕಿತಾ ಪ್ರಕಾಶನ ಪ್ರಕಟಣೆ–2012
5. ಡಾ: ಸಿದ್ದಲಿಂಗಯ್ಯ–ನನ್ನ ಜನಗಳು–ಕನ್ನಡ ಮತ್ತು ಸಂಸ್ಕೃತ ಇಲಾಖೆ ಬೆಂಗಳೂರು ಪ್ರಕಟಣೆ–2010
6. ಬಾಮಾ–ತಾಳೆಗರಿ–ತಮಿಳುಕ್ರೈಸ್ತದಲಿತಆತ್ಮಕಥನ: ಕನ್ನಡಕ್ಕೆಡಾ. ಎಚ್.ಎಸ್.ಅನುಪಮಾ.ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆ– 2016
7. ಕುಪ್ಪೆ ನಾಗರಾಜ–ಅಲೆಮಾರಿಯಅಂತರಂಗ–ನವಕರ್ನಾಟಕ ಪ್ರಕಾಶನ– ಪ್ರಕಟಣೆ ವರ್ಷ–2013